Doc-27
1-24

|| ಸತ್ಯಾನ್ನಾಸ್ತಿ ಪರೋ ಧರ್ಮಃ ||

Registered No M 1299

ಮೈಸೂರಿನಲ್ಲಿ ಪ್ರತಿ ಮಂಗಳವಾರವೂ
ಪ್ರಕಟಿಸಲ್ಪಡುವುದು.

ಸತ್ಯವಾದಿ

ಬಿಡಿ ಪ್ರತಿ ೩ ಪೈ

ವಾರ್ಷಿಕ ಚಂದಾ
ಅಂಚೆ ವೆಚ್ಚ ಸೇರಿ ರೂ. ೧—೮—೦

ಆಫೀಸು ಚಾಮರಾಜ ಅಗ್ರಹಾರ ಮೈಸೂರು

ಸಂಪುಟ ೮] ಮಂಗಳವಾರ ೮ನೆ ಜೂನ್ ೧೯೨೬ [ಸಂಚಿಕೆ ೧೫

ನಾನು ಮೆಚ್ಚಿಸುವೆನೋ ಅಥವಾ ಹಿಂಸಿಸುವೆನೊ
ನನ್ನ ನಿರ್ವಂಚನೆಯಾದ ಬುದ್ಧಿಯನ್ನು
ನಿಮಗೆ ಕೊಡುವೆನು
ನಾನು ಮತ್ತೇನೂ ಅಲ್ಲ 150 ಪುಟಗಳ

ಕಾಮಶಾಸ್ತ್ರ

ವೆಂಬ ಚಿಕ್ಕ ಪುಸ್ತಕವೇ ನಾನು
ಕಷ್ಟವನ್ನು ಅನುಭವಿಸುತ್ತಿರುವ ಮಾನವ ಸಾಮಾನ್ಯಕ್ಕೆ
— 45 ವರ್ಷಗಳಿಂದಲೂ —
ಉತ್ತಮ ಸೇವೆಯನ್ನು ಮಾಡುತ್ತಿದ್ದೇನೆ

ನನ್ನ ದರ್ಶನ ಮಾಡುವದಕ್ಕೆ ಅಭಿಲಾಷೆ
ಯುಂಟಾದರೆ ಒಂದು ಕಾರ್ಡು ಬರೆ
ದೊಡನೆಯೆ ಉಚಿತವಾಗಿ, ಅಂಚೆವೆಚ್ಚವಿಲ್ಲದೆ
ಒಡನೆ ಕಳುಹಿಸಿಕೊಳ್ಳಲು ಸಿದ್ಧವಾಗಿದ್ದೇನೆ

ವಿಳಾಸ—
ಆತಂಕ ನಿಗ್ರಹ ಫಾರ್ಮಸಿ
26 ಬ್ರಾಡ್ವೆ, ಮದ್ರಾಸು

Mysore Government Advertisement

ಮೈಸೂರು ರೈಲ್ವೆಗಳು

ಪ್ರಸಿದ್ಧಪತ್ರಿಕೆ

ಮೈಸೂರು ರೈಲ್ವೆ ವರ್ಕ್ ಷಾಪುಗಳಲ್ಲಿ ಮೌಲ್ಡರುಗಳೂ ಇಂಜಿನ್ ಫಿಟರುಗಳೂ ಮತ್ತು ರಿವಿಟರುಗಳೂ ಕೆಲಸಕ್ಕೆ ಬೇಕಾಗಿದೆ.

ಇಂಡಿಯನ್ ರೈಲ್ವೆ ವರ್ಕ್ ಷಾಪುಗಳ ಸಂಪೂರ್ಣಾನುಭವವುಳ್ಳ ಜನರು ಮಾತ್ರವೇ ಸದರೀ ಕೆಲಸಗಳಿಗಾಗಿ

ಲೋಕೋ ಮತ್ತು ಕ್ಯಾರೇಜ್
ಸೂಪರಿಂಟೆಂಡೆಂಟ್,
ಮೈಸೂರು ರೈಲ್ವೆಗಳು
ಮೈಸೂರು

ಎಂಬ ವಿಳಾಸಕ್ಕೆ ಅರ್ಜಿಯನ್ನು ಬರೆದುಕೊಳ್ಳಬಹುದಾಗಿದೆ.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ
ಮತ್ತು ಕಾಶ್ಮೀರ್ ಶಾಲುಗಳ
ವ್ಯಾಪಾರಿಗಳು
ಕೃಷ್ಣರಾಜ ಮೊಹಲ್ಲಾ, ಮೈಸೂರು

ಛಳಿಗಾಲದಲ್ಲಿ ಸರ್ವರೂ ಉಪಯೋಗಿಸಲೆಂಬ ಅಭಿಪ್ರಾಯದಿಂದ ಶಾಲುಗಳ ಖರೀದಿ ಕಡಮೆ ಮಾಡಿದ್ದೇವೆ.

ಇದರಿಂದ ನಮಾದಿಸಿರುವ ಖರೀದಿಯ ಅನೇಕ ನಮೂನೆ ಕಾಶ್ಮೀರ ಶಾಲುಗಳನ್ನು ತಯಾರಾಗುವ ಸ್ಥಳದಿಂದಲೆ ನೇರವಾಗಿ ಲಾಟುಲಾಟಾಗಿ ತರಿಸಿ ಸ್ವಲ್ಪ ಲಾಭವಿಟ್ಟು ಸುಲಭ ಬೆಲೆಯಿಂದ ವಿಕರ ಮಾಡುತ್ತಲಿರುವೆವಲ್ಲದೆ ಪರಸ್ಥಳದ ಗಿರಾಕಗಳಿಗೆ ರವಾನಿಸುವ ಶಾಲುಗಳಿಗೆ ಮಾತ್ರ ಪ್ಯಾಕಿಂಗು ಮತ್ತು ಪೋಸ್ಟೇಜು ಸಹಾ ಬೀಳದಂತೆ ಸದ್ರಿ ಛಾರ್ಜನ್ನು ನಾವೇ ವಹಿಸಿ ರವಾನಿಸಲು ಯೇರ್ಪಾಡು ಮಾಡಿದ್ದೇವೆ. ಒಂದಾವರ್ತಿ ತರಿಸಿ ಇದರಿಂದ ಆಗಬಹುದಾದ ಅನುಕೂಲವನ್ನು ಹೊಂದುವದರ ಮೂಲಕ ನಮ್ಮ ವ್ಯಾಪಾರವನ್ನು ಪ್ರೋತ್ಸಾಹಿಸುವಿರೆಂದು ನಂಬಿದೇವೆ.

ಶಾಲುಗಳ ಖರೀದಿ 1 ಕ್ಕೆ 10-8-0, 11-4-0, 12-8-0, 13-4-0, 15-8-0, 17-4-0, 19-8-0 22-4-0, 24-8-0, 27-4-0, 29-12-0, 32-8-0 37-4-0, 42-12-0, 52-12-0 ಮೊದಲ್ಗೊಂಡು 150 ರೂಪಾಯಿಗಳವರೆವಿಗೂ ಸ್ಟಾಕಿನಲ್ಲಿದೆ. ನಿಮಗೆ ಯಾವ ಖರೀದಿಯಲ್ಲಿರುವ ಶಾಲು ಬೇಕೋ ವಿಶದವಾಗಿ ಬರೆದಲ್ಲಿ ನಮ್ಮ ಖುದ್ ಆಜಮಾಯಿಷಿಯಿಂದ ಜುನಾಯಿಸಿ ರವಾನಿಸಲಾಗುತ್ತೆ.

ಸಿಗುವ ಸ್ಥಳ—ಎಂ. ಎಸ್. ಸಿದ್ದಪ್ಪ ಬ್ರದರ್ಸ್
ಹಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ
ವ್ಯಾಪಾರಿಗಳು
ಕೃಷ್ಣರಾಜ ಮೊಹಲ್ಲಾ, ಮೈಸೂರು.

ಇಂಡಿಯಾ ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್, ಕಲ್ಕತ್ತ

ಸ್ಥಾಪನೆ ೧೯೧೦. ಇಂಡಿಯಾ ಸರ್ಕಾರದ ಸೆಕ್ಯೂರಿಟಿ ಹೊಂದಿರುತ್ತೆ. ಒಟ್ಟು ಫಂಡು ರೂ. ೧೦೦೦೦೦ ಕ್ಕಿಂತ ಹೆಚ್ಚಿದೆ. ಕ್ಲೇಮ್ಸ್ ಕೊಟ್ಟಿರುವದು ೧೬೦೦೦೦ ರೂ. ತಿಂಗಳಿಗೆ ರೂ ೧ ಯೂ ೮ ಆಣೆ ಪ್ರಕಾರ ೧೪ ವರ್ಷ ಕಂತು ಕೊಡುವ ಪುರುಷರೂ ಸ್ತ್ರೀಯರೂ ರೂ ೫೦೦, ೨೫೦ ಗಳವರೆಗೆ ವೈದ್ಯಪರೀಕ್ಷೆ ಇಲ್ಲದೆ, ವಯಸ್ಸು ನಿರ್ಧರಿಸಲು ಜಾತಕವಿಲ್ಲದೆ ಜೀವವಿಮೆ ಪಡೆಯಬಹುದು. ಹೆಚ್ಚು ವಿಷಯಕ್ಕೂ ಏಜನ್ಸಿ ಷರತ್ತಿಗೂ ಅರ್ಧ ಆಣೆ ಸ್ಟಾಂಪಿನೊಡನೆ ಕೆಳಗಿನವಿಳಾಸಕ್ಕೆ ಬರೆಯಿರಿ

ಹೆಚ್. ಹೆಚ್. ಶ್ರೀಕಂಠಯ್ಯ
ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್
1151 ಚಾಮರಾಜಪುರಂ, ಮೈಸೂರು

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ ಗಂಧದ ಬಿಲ್ಲೆಗಳೂ ಪನ್ನೀರು ರಾಯಲ್ ಸುಗಂಧಿ ಎಲ್ಲಾ ತರಹದ ಪರಬತ್ತುಗಳು ಇವುಗಳೆಲ್ಲಾ ದೊರೆಯುತ್ತವೆ. ಖರೀದಿ ಕಡಮೆಯಾಗಿಯೂ ಪದಾರ್ಥಗಳು ನಂಬಿಕೆಯಾಗಿಯೂ ಇರುತ್ತದೆ. ಅಪೇಕ್ಷಿಸುವವರು ತರಿಸಿಕೊಳ್ಳಬೇಕಾಗಿ ಪ್ರಾರ್ಥನೆ

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರ ಮೈಸೂರು

ಅರ್ಥಸಾಧಕ ಪತ್ರಿಕೆ

ಮೈಸೂರು ಸರ್ಕಾರದ ಉದಾರಾಶ್ರಯದಲ್ಲಿ ಪ್ರಕಟವಾಗುವ ಉತ್ತಮ ತರದ ವಾರಪತ್ರಿಕೆ

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ಕೈಗಾರಿಕೆ ಪರಸ್ಪರಸಹಾಯ ಪೌರಸಾಮಾಜಿಕ ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನ ಕೊಡಲ್ಪಡುವದು. ವಿದ್ಯಾವಂತರೂ ಪೂರ್ಣಪರಿಶ್ರಮವುಳ್ಳ ದೊಡ್ಡ ಮನುಷ್ಯರುಗಳಿಂದ ಲೇಖನಗಳು ಬರೆಯಲ್ಪಡುವವು. ಆಯಾ ವಾರದಲ್ಲಿ ಆಗುವ ಸರ್ಕಾರಿ ಆರ್ಡರುಗಳೂ ವರ್ಗವರ್ಗಿಗಳೂ ಪ್ರಕಟಣೆಗಳೂ ಪ್ರಕಟಿಸಲ್ಪಡುತ್ತೆ. ಅಧಿಕಾರಿಗಳೂ ವರ್ತಕರೂ ಸರ್ವರೂ ಓದತಕ್ಕ ಪತ್ರಿಕೆ.

ವಾರ್ಷಿಕ ಚಂದಾ ವಿವರ: ಪೋಷಕರಿಗೆ ರೂ 3 0 0
ಇತರರಿಗೆ ಪರಸ್ಥಳಕ್ಕೆ ಪೋಸ್ಟೇಜುಸೇರಿ 2 8 0

ವಿಳಾಸ—ಎಡಿಟರ್ ಅರ್ಥಸಾಧಕ ಪತ್ರಿಕೆ
ಅರಳೇಪೇಟೆ ಬೆಂಗಳೂರು ಸಿಟಿ

ಸೂಚನೆ

ಸತ್ಯವಾದಿಯ ಮಾದರೀ ಸಂಚಿಕೆಯನ್ನು ಪಡೆಯುವ ಮಹನೀಯರು ತಾವು ಚಂದಾದಾರರಾಗುವದಲ್ಲದೆ ತಮ್ಮ ಮಿತ್ರಮಂಡಲಿಯಲ್ಲಿಯೂ ಪ್ರಚುರಪಡಿಸಬೇಕಾಗಿ ಕೋರಿದೆ.

'ಸತ್ಯವಾದಿ'

ಬೆಂಗಳೂರು ಶರೀರವ್ಯಾಯಾಮಶಾಲಾ.

ಆಧುನಿಕ ಕಾಲದ ತರುಣ ಜನಾಂಗವು ದಿನೇದಿನೇ ಬಲಹೀನತೆಯನ್ನು ಹೊಂದುತ್ತಿರುವುದು. ಮುಖದಲ್ಲಿ ವರ್ಚಸ್ಸಿಲ್ಲ. ನಾನಾವಿಧ ಉಡುಪುಗಳಿಂದ ಶೋಭಿಸಬೇಕೇ ವಿನಃ, ಅವರ ಎದೆ ಬಾಹುಗಳನ್ನು ಪರೀಕ್ಷಿಸಿ ನೋಡಿದರೆ ಎಂಥವರಿಗಾದರೂ ವ್ಯಾಕುಲವಾಗದೆ ಇರದು.

ತರುಣ ಜನಾಂಗವನ್ನು ಇಂತಹ ದುಸ್ಥಿತಿಗೆ ತಂದಿರುವುದು ನಾಗರೀಕತೆಯೆಂಬ ಸೊಂಕುಜಾಡ್ಯವು ಮತ್ತು ಈಗಿನ ಕಾಲದ ಶಿಕ್ಷಣವು. ಸ್ಕೂಲುಗಳಲ್ಲಿ ಮತ್ತು ಕಾಲೇಜುಗಳಲ್ಲಿ ಬಾಲಕರ ಮತ್ತು ತರುಣರ ಶರೀರ ವ್ಯಾಯಾಮಕ್ಕೆ ಸಾಕಷ್ಟು ಸಿಗಾ ಕೊಡುತ್ತಿಲ್ಲ. ಈ ಚೀಚೆಗೆ ತರುಣರಲ್ಲಿಯೂ, ದೊಡ್ಡವರಲ್ಲಿಯೂ ಒಂದು ವಿಧವಾದ ಜಾಗೃತಿಯುಂಟಾಗಿರುವುದು. ತರುಣ ಜನಾಂಗವನ್ನು ಮೊದಲು ಬಲಪಡಿಸಬೇಕೆಂದು ಕೆಲವು ಮುಖಂಡು ಕಂಕಣಕಟ್ಟಿ ನಿಂತಿದ್ದಾರೆ. ಮತ್ತೆ ಕೆಲವರು ಕಾಲೇಜುಗಳಲ್ಲಿ ವ್ಯಾಸಂಗ ಮಾಡುವವರಿಗೆ ಸೈನ್ಯದ ಶಿಕ್ಷಣವು ಅತ್ಯವಶ್ಯಕವಾಗಿ ಕೊಡಬೇಕೆಂದು ಪ್ರತಿಪಾದಿಸಹತ್ತಿದ್ದಾರೆ. ಹಿಂದೂ ಮಹಾಸಭೆಯವರು ಹಿಂದೂ ಜನಾಂಗವನ್ನು ಭದ್ರಪಡಿಸುವುದಕ್ಕೋಸ್ಕರ ಅಲ್ಲಲ್ಲಿ ಗರಡಿಗಳನ್ನೂ ಅಖಾಡಾಗಳನ್ನೂ ಸ್ಥಾಪಿಸಿ ಯುಯುವಕರನ್ನು ತರಬೇತು ಮಾಡುತ್ತಿರುವರು. ಇವೆಲ್ಲಾ ಶುಭಸೂಚನೆಗಳು.

ಈಗ ೪, ೫ ವರ್ಷಗಳಿಂದ ಬೆಂಗಳೂರಿನಲ್ಲಿ ಪ್ರೊಫೆಸರ್ ಎಂ. ವಿ. ಕೃಷ್ಣರಾಯರು ಒಂದು ಶರೀರ ವ್ಯಾಯಾಮ ಶಾಲೆಯನ್ನು ನಡೆಸುತ್ತಿರುವರು. ನಮ್ಮ ಸಂಸ್ಥಾನದ ತರುಣರು ಮಾತ್ರವಲ್ಲದೆ ಹಿಂದೂಸ್ಥಾನದ ಇತರ ಭಾಗಗಳಿಂದಲೂ ಜನರು ಬಂದು ಶಿಕ್ಷಣವನ್ನು ತೆಗೆದುಕೊಂಡು ಹೋಗುತ್ತಿರುವರು. ನಮ್ಮ ಸಂಸ್ಥಾನದ ಇಂಥಾ ಶರೀರ ವ್ಯಾಯಾಮ ಶಾಲೆಯು ಸ್ಥಾಪಿಸಿದುದು ಇದೇ ಮೊದಲು, ನಮ್ಮ ಸರಕಾರದವರು ಪ್ರೊಫೆಸರ್ ಕೃಷ್ಣರಾಯರು ಕೈಕೊಂಡಿರುವ ಕೆಲಸಕ್ಕೆ ಉತ್ತೇಜನ ಕೊಟ್ಟು ೩ ವರುಷಗಳಿಂದಲೂ ವರ್ಷಕ್ಕೆ ೨೫೦೦ ರೂ. ಗಳಂತೆ ಗ್ರಾಂಟನ್ನು ಕೊಟ್ಟುಕೊಂಡು ಬಂದಿದ್ದರೆಂದೂ ಆದರೆ ಪ್ರೊಫೆಸರ್ ಕೃಷ್ಣರಾಯರ ದುರದೃಷ್ಟದಿಂದಲೋ ಅಥವಾ ನಮ್ಮ ಸಂಸ್ಥಾನದ ಯುವಕರ ದೌರ್ಭಾಗ್ಯದಿಂದಲೋ ಹೀಗೆ ಕೊಡುತ್ತಿದ್ದ ಗ್ರಾಂಟಿನಲ್ಲಿ ಅರ್ಧಭಾಗವನ್ನು ಕಮ್ಮಿ ಮಾಡಬೇಕೆಂದು ಈಗಿನ ವಿದ್ಯಾಭ್ಯಾಸದ ಇಲಾಖೆಯ ಮೊಖ್ತೇಸರರಾದ ಮಿ|| ಮ್ಯಾಥರ್ರವರು ಸರಕಾರಕ್ಕೆ ಶಿಫಾರಸು ಮಾಡಿರುವರಾಗಿಯೂ ಸರಕಾರದವರು ಮಿ|| ಮ್ಯಾಥರ್ರವರ ಶಿಫಾರಸನ್ನೇ ಅಂಗೀಕಾರ ಮಾಡಿರುವುದಾಗಿ ವರ್ತಮಾನ ಹುಟ್ಟಿದೆ. ಸರಕಾರದವರು ಸಂಸ್ಥಾನದ ತರುಣ ಜನಾಂಗದ ಶರೀರದ ಉನ್ನತಿಗೆ ಯೋಗ್ಯವಾದ ಏರ್ಪಾಡುಗಳನ್ನು ಎಷ್ಟುಬೇಕೋ ಅಷ್ಟನ್ನು ಇದುವರೆಗೂ ಮಾಡದಿದ್ದರೂ, ಸಂಸ್ಥಾನಕ್ಕೆ ಮಾತ್ರವಲ್ಲದೆ ಹೊರಗಿನವರಿಗೂ ಮಹದುಪಕಾರವನ್ನು ಗೈಯುತ್ತಿರುವ ಶರೀರ ವ್ಯಾಯಾಮ ಶಾಲೆಗೆ ಕೊಡುತ್ತಿರುವ ಸಹಾಯವನ್ನು ಕಮ್ಮಿ ಮಾಡುವುದು ಉಚಿತವಲ್ಲ. ಈ ಮಧ್ಯೆ ಸರಕಾರದವರು ತಾವು ಮಾಡಿದ ಆರ್ಡರನ್ನು ಪುನಃ ಪರ್ಯಾಲೋಚಿಸಿ, ಗ್ರಾಂಟನ್ನು ಕಮ್ಮಿ ಮಾಡದೆ ಸಾಧ್ಯವಾದರೆ ಹೆಚ್ಚು ಉತ್ತೇಜನಕೊಟ್ಟು ಶರೀರ ವ್ಯಾಯಾಮ ಶಾಲೆಯು ಸಾರೋದ್ಧಾರವಾಗಿ ನಡೆಯುವಂತೆ ಮಾಡದಲ್ಲಿ ಪ್ರೊಫೆಸರ್ ಕೃಷ್ಣರಾಯರ ಪ್ರಯತ್ನವು ಸಾರ್ಥಕವಾಗುವುದು. ನಮ್ಮ ತರುಣ ಜನಾಂಗವು ಅಳಿಯದೆ ಉಳಿಯುವುದು.

ನಿಂಬೆಹಣ್ಣಿನ ಉಪಯೋಗಗಳು

ಅನೇಕರಿಗೆ ನಿಂಬೆಹಣ್ಣಿನ ಉಪಯೋಗವು ತಿಳಿಯದಾಗಿರುವುದು. ಕ್ರಿಮಿಗಳನ್ನು ನಾಶಮಾಡುವ ಶಕ್ತಿಯು ನಿಂಬೆಹಣ್ಣಿನ ರಸದಲ್ಲುಂಟು. ಒಂದು ಗಾಜಿನ ಟಂಬ್ಲರಿನ ತುಂಬಾ ನೀರಿನಲ್ಲಿ ಅರ್ಧ ನಿಂಬೆಹಣ್ಣಿನ ರಸವನ್ನು ಹಿಂಡಿ, ಕುಡಿದರೆ ಬಾಯಿಯು ಮತ್ತು ಗಂಟಲು ಸಹಾ ಬಹಳ ಶುಭ್ರವಾಗುವದು. ಬೇಸಗೆಯ ಕಾಲದಲ್ಲಿ ಬಿಸಿನೀರಿಗೆ ನಿಂಬೆಹಣ್ಣಿನ ರಸವನ್ನು ಹಿಂಡಿ ಕುಡಿದಲ್ಲಿ, ಮೂತ್ರವು ಸರಾಗವಾಗಿ ಆಗುವದು. ನಿಂಬೆಹಣ್ಣಿನ ರಸವು ಬಾಯಾರಿಕೆಯನ್ನು ಮತ್ತು ಜ್ವರವನ್ನು ಅಡಗಿಸಬಲ್ಲದು. ಅದು ವಿಷಮಶೀತಜ್ವರ, ಕಾಲರಾ ಮತ್ತು ಆಮರಕ್ತ ಇವುಗಳ ಕ್ರಿಮಿಗಳನ್ನು ಕೊಲ್ಲಬಲ್ಲದು. ನಿಂಬೆಹಣ್ಣಿನ ರಸವು ಇತರ ಮಾದಕ ಪದಾರ್ಥಗಳಿಗಿಂತ ಎಷ್ಟೋ ಶ್ರೇಷ್ಠವಾದದ್ದು. ಪ್ರಯಾಣಿಕರು ತಮ್ಮ ಜತೆಯಲ್ಲಿ ತೆಗೆದುಕೊಂಡು ಹೋಗುವ ನೀರಿಗೆ ಈ ರಸವನ್ನು ಹಿಂಡಿದರೆ ಆ ನೀರು ಶುದ್ಧಿಯನ್ನು ಹೊಂದುವದು. ವಾಯುನೋವುಳ್ಳವರಿಗೂ, ಅಜೀರ್ಣವಾದವರಿಗೂ ಈ ರಸವು ಒಳ್ಳೆಯ ಔಷಧ. ಈ ರಸವನ್ನು ಇತರ ಆಹಾರ ಪದಾರ್ಥಗಳ ಜತೆಯಲ್ಲಿ ತೆಗೆದುಕೊಳ್ಳುವದಕ್ಕಿಂತಲೂ, ಪ್ರಾತಃಕಾಲ ಹಾಸಿಗೆಯಿಂದ ಎದ್ದ ತರವಾಯ ಅಥವಾ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೊಳ್ಳುವದು ಬಹಳ ಒಳ್ಳೆಯದು ಮತ್ತು ಆರೋಗ್ಯಕರ. ಮಲೇರಿಯಾ ಮತ್ತು ಕಾಲರಾ ವೇಳೆಗಳಲ್ಲಿ ನಿಂಬೇಹಣ್ಣು ಬಹಳ ಉಪಕಾರಿಯಾದುದು. ಭೋಜನಕ್ಕೆ ಅರ್ಧಘಂಟೆ ಮುಂಚಿತವಾಗಿ ನಿಂಬೇಹಣ್ಣಿನ ರಸವನ್ನು ತೆಗೆದುಕೊಂಡರೆ ಮುಂದಿನ ಊಟದ ಹೊತ್ತಿಗೆ ಹಸಿವೆಯು ಚೆನ್ನಾಗಿ ಆಗುವುದು.

ದೇಶಭಾಷೆಗಿನ್ನೂ ಪ್ರಾಮುಖ್ಯತೆ ಬರದಿರುವುದಕ್ಕೆ ಕಾರಣವೇನು ?

ಸಾಡ್ಲರ್ ಕಮೀಷನ್ನಿನಲ್ಲಿ ಅನೇಕರು ದೇಶಭಾಷೆಯೇ ಮುಖ್ಯವೆಂದು ಒಪ್ಪಿಕೊಳ್ಳುತ್ತಿದ್ದಾರೆ. ಇಂಗ್ಲೀಷೇ ಬೇಕೆಂಬುವರಲ್ಲಿ ಇಂಗ್ಲೀಷರೇ ಹೆಚ್ಚು. ಅವರ ಭಾಷೆಯನ್ನೇ ಭರತಖಂಡದಲ್ಲಿ ಪ್ರಬಲಕ್ಕೆ ತರಬೇಕಾದದ್ದೇ ಅವರ ಮುಖ್ಯ ಪ್ರಯತ್ನ. ಇವರ ಜತೆಯಲ್ಲಿ ಕೆಲವು ಮಂದಿ ಮಹಮ್ಮದೀಯರೂ ಸೇರುತ್ತಾರೆ. ತಮ್ಮ ಭಾಷೆಯು ಹೇಗೂ ಮುಖ್ಯವಾಗತಕ್ಕದ್ದಲ್ಲವೆಂಬುದರ ಮೇಲೆ ಅವರು ಇತರ ಭಾಷೆಗೆ ಅವಕಾಶ ಕೊಟ್ಟಿಲ್ಲ. ಹೀಗೆ ದೇಶಭಾಷೆಯ ಪ್ರಾಮುಖ್ಯತೆಯನ್ನು ಒಪ್ಪದಿರುವವರು ಸ್ವಲ್ಪವೇ ಮಂದಿ. ಇಂಗ್ಲೀಷಿನಲ್ಲಿ ಇರತಕ್ಕಷ್ಟು ಗ್ರಂಥಗಳು ಇತರ ಭಾಷೆಗಳಲ್ಲಿಲ್ಲವೆಂಬುವದೊಂದು ದೊಡ್ಡ ನೆಪ. ಪ್ರಯತ್ನಪಟ್ಟರೆ ಒಂದೆರಡು ವಾರಗಳಲ್ಲಿ ವಂದೆರಡು ತಿಂಗಳಲ್ಲಿ ಕಡೆಗೆ ವಂದೆರಡು ವರ್ಷಗಳಲ್ಲಿ ಸರಿಯಾದ ತರ್ಜುಮೆ ಪುಸ್ತಕಗಳು ದೊರೆಯದೇ ಹೋದಾವೇ ! ದೇಶಭಾಷೆಗೆ ಪ್ರಾಧಾನ್ಯವನ್ನು ಕೊಟ್ಟಪಕ್ಷದಲ್ಲಿ ಉಪಯುಕ್ತ ವಿಷಯಗಳನುಳ್ಳ ಅನೇಕ ಹಳೇ ಪುಸ್ತಕಗಳು ಹೊರಬೀಳದಿದ್ದಾವೆ

ಇಂಗ್ಲೀಷೇ ವಿದ್ಯಾವಿಷಯದಲ್ಲಿ ಪ್ರಧಾನಸಾಧನವಾಗಿರಬೇಕೆಂದು ಹೇಳತಕ್ಕವರು ಈ ಕಾರಣಗಳನ್ನು ನಿದರ್ಶಿಸುತ್ತಾರೆ.—

1. ಇಂಡಿಯಾದಲ್ಲಿ ಅನೇಕ ಭಾಷೆಗಳಿವೆ. ದೇಶವೆಲ್ಲಾ ವಂದಾಗಿರಬೇಕಾಗಿದ್ದರೆ ಅದಕ್ಕೆ ವಂದೇ ಭಾಷೆ ಇರಬೇಕಾದದ್ದು ಅವಶ್ಯಕ. ಇಂಗ್ಲೀಷು ಆ ಸ್ಥಿತಿಗೆ ಬರುತ್ತಲಿದೆ. ಅದನ್ನು ತಪ್ಪಿಸತಕ್ಕದ್ದಲ್ಲ.

2 ದೇಶಭಾಷೆಗಳು ವಿದ್ಯಾಬೋಧೆಗೆ ಸಾಕಾದಷ್ಟು ಅಭಿವೃದ್ಧಿ ಪಡೆಯಲಿಲ್ಲ.

3 ಭಾರತ ವಿದ್ಯಾರ್ಥಿಗಳು ಪಾಶ್ಚಾತ್ಯ ನಾಗರೀಕತೆಯನ್ನು ಕಲಿಯಬೇಕಾಗಿದೆ. ಅದಕ್ಕಾಗಿ ಇಂಗ್ಲೀಷ್ ಪ್ರಧಾನವಾಗಿರಲೇಬೇಕು

4 ಹಿಂದೂಸ್ಥಾನವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಅಂತರ್ಭೂತವಾಗಿದೆ. ಆದ್ದರಿಂದ ಇಂಗ್ಲೀಷ್ ಭಾಷೆ ಇರಬೇಕಾದದ್ದು ಅವಸರವು

5. " ವಿದ್ಯಾಸಾಧನೆಗಳಲ್ಲಿ ಇಂಗ್ಲೀಷ್ ನಮಗೆ ಸುಲಭವಾಗಿ ಲಭ್ಯವಾಗುತ್ತದೆ.

6. ೫೦ ವರ್ಷಗಳಿಂದ ಇಂಗ್ಲೀಷು ವಿದ್ಯಾಸಾಧನವಾಗಿ ಏರ್ಪಟ್ಟಿರುವದರಿಂದ ಅದನ್ನು ತಪ್ಪಿಸಬಾರದು.

7 ಇಂಡಿಯಾ ದೇಶಸ್ಥರು ತಮ್ಮ ಮಕ್ಕಳಿಗೆ ಇಂಗ್ಲೀಷೇ ಕಲಿಸಬೇಕೆಂದು ಅಪೇಕ್ಷಿಸುತ್ತಾರೆ

8. ಇಂಗ್ಲೀಷಿನಲ್ಲಿ ಅನುಕೂಲವಾಗಿ ಕಾಲಕ್ಷೇಪ ನಡೆಯುತ್ತಿದೆ.

9 ದೇಶಭಾಷೆಗಳಲ್ಲಿ ಪುಸ್ತಕಗಳನ್ನು ಬರೆಯುವುದಕ್ಕೆ ಬಹಳ ಕಾಲವೂ ಶ್ರಮೆಯೂ ಧನವ್ಯಯವೂ ಹಿಡಿಯುತ್ತದೆ.

ಈ ಕಾರಣಗಳಿಗೆ ಸಮಾಧಾನ.—

೧. ಏಕಭಾಷೆ—ಹಿಂದೂಸ್ಥಾನದಲ್ಲಿ ಹಿಂದೀಭಾಷೆಯೇ ಹೆಚ್ಚು. ಆದ್ದರಿಂದ ಹಿಂದಿಯೇ ಏಕಭಾಷೆಯಾಗಿ ನಿಲ್ಲುವದಕ್ಕೆ ತಕ್ಕದ್ದಾಗಿದೆ. ಇಷ್ಟಕ್ಕೂ ಇಡೀ ಹಿಂದೂಸ್ಥಾನದಲ್ಲಿ ಇಂಗ್ಲೀಷ್ ತಿಳಿದವರು ಸಾವಿರಕ್ಕೊಬ್ಬರೂ ಇರುವದಿಲ್ಲ. ೨. ಅಭಿವೃದ್ಧಿಯ ವಿಷಯ— ಪ್ರಜಾಪಾಲಕರು ಅಭಿವೃದ್ಧಿಗೆ ತಕ್ಕ ಅವಕಾಶವನ್ನು ಕಲ್ಪಿಸಿದಪಕ್ಷದಲ್ಲಿ ಏತಕ್ಕೆ ಅಭಿವೃದ್ಧಿಯಾಗುವದಿಲ್ಲ. ೩. ನಮ್ಮ ಸಮಸ್ತ ವ್ಯವಹಾರಗಳೂ ಈಗಲೂ ಮೊದಲಿನ ನಾಗರಿಕತೆಯನ್ನೇ ಬಹಳಮಟ್ಟಿಗೆ ಅನುಸರಿಸಿರುತ್ತವೆ. ಮೊದಲು ಇದನ್ನು ನೋಡಿಕೊಂಡಲ್ಲವೇ ಇತರ ನಾಗರಿಕತೆಯ ವಿಷಯವನ್ನು ನೋಡಿಕೊಳ್ಳಬೇಕು. ೪. ನಮ್ಮ ಭಾಷೆಯನ್ನು ನಾವು ಅಭಿವೃದ್ಧಿಪಡಿಸಿಕೊಂಡ ಹಾಗೆಲ್ಲಾ ನಮ್ಮ ಭಾಷಾಗ್ರಂಥಗಳ ಹಾಳೆಹಾಳೆಯಲ್ಲಿ ಹೇಳಿರತಕ್ಕ ಪ್ರಭುಭಕ್ತಿ ವಿಚಾರವು ಮನಸ್ಸಿನಲ್ಲಿ ನಾಟಿ ಪ್ರಭುಭಕ್ತಿಯು ದಿನದಿನಕ್ಕೆ ಹೆಚ್ಚುವದೇ ಹೊರ್ತು ಇಂಗ್ಲೀಷ್ ಸಾಮ್ರಾಜ್ಯಕ್ಕೆ ಇದರಿಂದ ಯಾವ ಕೆಡುಕೂ ಉಂಟಾಗುವುದಿಲ್ಲ. ೫. ನಮ್ಮ ಭಾಷೆಯು ನಮಗೆ ಸುಲಭವಾಗಿ ಬೋಧೆಯಾಗುತ್ತದೆ. ೬. ಇಂಗ್ಲೀಷು ೫೦ ವರ್ಷಗಳಿಂದ ನೆಲೆಗೊಂಡಿದ್ದಾಗ್ಯೂ ಅದರಿಂದ ನಮಗೆ ಎಷ್ಟು ಪ್ರಯೋಜನವಾಯಿತೆಂಬುದನ್ನು ಬಹುಕಾಲದ ಅನುಭವದ ಮೇಲೆ ಗೊತ್ತಾಗಬೇಕಾಗಿದೆ. ೭. ಇದುವರಿಗೆ ಕಷ್ಟಪಟ್ಟು ಓದಿದ್ದಕ್ಕೂ ತಕ್ಕ ಪ್ರತಿಫಲ ದೊರೆಯುತ್ತಿದ್ದುದನ್ನೂ ನೋಡಿ ಸಂರಕ್ಷಕರಿಗೆ ಆರೀತಿಯಾದ ಅಭಿಪ್ರಾಯವುಂಟಾಯಿತು. ೮. ಇಂಗ್ಲೀಷ್ ವಿದ್ಯಾವಂತರ ಸಂಖ್ಯೆ ಹೆಚ್ಚುವವರಿಗೆ ಯಾವ ಅನುಕೂಲವಿತ್ತೋ ಅಷ್ಟು ಅನುಕೂಲವು ಈಗ ಎಲ್ಲಿಯದು. ೯. ಪ್ರಯತ್ನಪಟ್ಟರೆ ತರ್ಜುಮೆ ಪುಸ್ತಕಗಳಿಗೆ ಕಡಿಮೆಯೆ !

---

೨೫ ವರ್ಷ ವಯಸ್ಸಿನ ಹೆಂಗಸೊಬ್ಬಳು ರೈಲಿನಿಂದ ಇಳಿದು ಹೋಗುತ್ತಿದ್ದಾಗ ಫ್ಲೆಚರ್ ಎಂಬ ಟಿಕೇಟು-ಕಲೆಕ್ಟರು ಆ ಹೆಂಗಸಿನ ಮೈಮೇಲೆ ಕೈಹಾಕಿದನೆಂದು ಹೌರಾ ಕೋರ್ಟಿನವರು ೩ ತಿಂಗಳು ಸಜಾ ವಿಧಿಸಿದಾರೆ.

ವೃತ್ತಾಂತಸಂಗ್ರಹ

ಕಲ್ಕತ್ತಾದಲ್ಲಿನ ಹಿಂದೂ ಮುಸಲ್ಮಾನರ ದೊಂಬಿಯಲ್ಲಿ ಗೋಹತಿಯಲ್ಲಿನ ಪುರಾತನ ಶಿವದೇವ ಪ್ರತಿಮಯು ಕಳವುಮಾಡಲ್ಪಟ್ಟು, ಒಂದು ಚರಂಡಿಗೆ ಬಿಸಾಡಲ್ಪಟ್ಟಿದ್ದಿತು. ಈಚೆಗೆ ಅದು ಸಿಕ್ಕಿರುತ್ತದಂತೆ.

ಜಾತಿದ್ವೇಷ ಹುಟ್ಟಿಸುವ ಲೇಖನಗಳನ್ನು ಪ್ರಕಟಿಸಲಾಗದೆಂದು ಲಾಹೋರಿನ ಪತ್ರಿಕೆಗಳಿಗೆ ಅಲ್ಲಿಯ ಮ್ಯಾಜಿಸ್ಟ್ರೇಟರ ಎಚ್ಚರಿಕೆ.

ಕುದುರೆ ಜೂಜಿನಿಂದ ಅನೇಕ ಅನರ್ಥಗಳು ಸಂಭವಿಸುವುದೆಂದು ಗ್ವಾಲಿಯರಿನ ಮಹಾರಾಣಿಯವರು ತಮ್ಮ ರಾಜ್ಯದಲ್ಲಿ ಈ ಪಂಥ್ಯವನ್ನು ನಿಲ್ಲಿಸಿರುವರು.

ಕಲ್ಕತ್ತಾದ ಸಿ.ಐ.ಡಿ. ಸ್ಪೆಷಲ್ ಸೂಪರಿಂಟೆಂಡೆಂಟರವರಾದ ರಾಯ್ ಬಹದ್ದೂರ್ ಭೂಪೇಂದ್ರನಾಥ ಚಟ್ಟರ್ಜೀ ಎಂಬುವರು ಅಲಿಪುರದ ಸೆಂಟ್ರಲ್ ಜೈಲಿಗೆ ಬಾಂಬಿನ ಕೇಸಿಗೆ ಸಂಬಂದಪಟ್ಟು ಹೋಗಿದ್ದಾಗ ಒಬ್ಬ ಖೈದಿಯು ಚೂರಿಯಿಂದ ತಿವಿದು ಕೊಂದನು.

ಪುದುಕೋಟೆಯಲ್ಲಿ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಯತ್ನವು ನಡೆದಿದೆ. ಈಗಾಗಲೇ 55400 ರೂಪಾಯಿಗಳು ವಸೂಲಾಗಿದೆ. ದಿವಾನ್ ಬಹದ್ದೂರ್ ಟಿ ಮುತ್ತಯ್ಯ ಚೆಟ್ಟಿಯವರು 25 ಸಾವಿರ ರೂಪಾಯಿಗಳನ್ನು ಕೊಟ್ಟಿರುವವರು.

ಪೂನಾಪಟ್ಟಣದಲ್ಲಿ ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯ ಮುದ್ರಣಾಲಯಗಳಿಗೆ ಬೆಂಕಿಬಿದ್ದು ವಿಪರೀತ ಲುಕ್ಸಾನಾಗಿರುವದು ಸರಿಯಷ್ಟೆ. ಇದಕ್ಕೋಸ್ಕರ ಸರ್ವೆಂಟ್ ಆಫ್ ಇಂಡಿಯಾ ಇಂಗ್ಲೀಷು ವಾರ ಪತ್ರಿಕೆಯನ್ನು ಕೆಲವು ದಿವಸಗಳ ವಟ್ಟಿಗೆ ನಿಲ್ಲಿಸಲ್ಪಟ್ಟಿರುವದು. ತಮ್ಮ ಯಂಗ್ ಇಂಡಿಯಾ ಮುದ್ರಣಾಲಯದಲ್ಲಿ ಸರ್ವೆಂಟ್ ಆಫ್ ಇಂಡಿಯಾ ಪತ್ರಿಕೆಯನ್ನು ಮುದ್ರಿಸಿ ಕೊಡುವೆನೆಂದು ಶ್ರೀ ಶ್ರೀನಿವಾಸ ಶಾಸ್ತ್ರಿಗಳಿಗೆ ಮಹಾತ್ಮ ಗಾಂಧಿಯವರು ದಬರೆದಿರುವರು.

ಕಲ್ಕತ್ತಾ, ಬಳಿ ಮತ್ತೆ ಹಿಂದೂಮಹಮದೀಯರುಗಳಿಗೆ ಮನಸ್ತಾಪವುಂಟಾಗಿ ಹೊಡೆದಾಟಗಳಾಗಿ ಅನೇಕರಿಗೆ ಗಾಯಗಳಾಗಿವೆ.

ಕೋಲಾರದ ಭಂಗಾರದ ಗಣಿಗಳಲ್ಲಿ ೮೦೨೩೨೪ ರೂಪಾಯಿ ಬೆಲೆಬಾಳುವ ಚಿನ್ನವು ತೆಗೆಯಲ್ಪಟ್ಟು ಬೊಂಬಾಯಿನ ಟಂಕಸಾಲೆಗೆ ಸಾಗಿಸಲ್ಪಟ್ಟಿದೆ.

ಇಂಗ್ಲೆಂಡಿನಲ್ಲಿ ಕೆಲಸಗಾರರ ಗುಂಪು ಕಟ್ಟಿದ್ದರಿಂದ ದಿನಕ್ಕೆ ೩೦೦ ಪೌಂಡ್ ನಷ್ಟವಾಗುತ್ತಿರುವಂತೆ ಅರ್ಥಿಕಜ್ಞರು ಪ್ರಕಟಿಸುತ್ತಲಿದಾರೆ.

ಸುಮಾರು ೫೪೧ ಪೌಂಡು ಅಪೀಮು ಚೈನಾದಿಂದ ಪಿನಾಂಗಿಗೆ ಗುಟ್ಟಾಗಿ ರವಾನಿಗಿದ್ದದ್ದನ್ನು ಸರ್ಕಾರದವರು ಕಂಡುಹಿಡಿದಿದ್ದಾರೆ.

ಈಗತಾನೆ ಬಂದಿದೆ. ಬೇಗ ತರಿಸಿಕೊಳ್ಳಿರಿ.

ಫ್ರೆಂಚ್ ಶಯನಗೃಹ ಫೋಟೋಗಳು.

ಪ್ಯಾರಿಸ್ ಯುವತಿಯರ ವಾಸ್ತವ್ಯವಾದ ಜೀವನದ ವಿವಿಧ ಅಂಗವಿನ್ಯಾಸಗಳಿಂದ ತೆಗೆದಿದೆ. ನೋಡುವುದಕ್ಕೆ ಅತಿ ಮನೋಹರ. ಆಂತರ್ಯ ಬೆಲೆಯನ್ನು ವರ್ಣಿಸಲಸಾಧ್ಯ. ಮಹಲುಗಳಲ್ಲೂ ಬಂಗ್ಲೆಗಳಲ್ಲೂ ಮತ್ತು ಪ್ರೈವೆಟ್ ಸ್ಥಳಗಳಲ್ಲೂ ಅಲಂಕಾರಕ್ಕೆ ಯೋಗ್ಯವಾಗಿದೆ. ೧೨ ಫೋಟೋಗಳ ಒಟ್ಟು ಸೆಟ್ಟಿಗೆ ರೂ. ೩.

ದೊರೆಯುವ ಸ್ಥಳ—ಪಿ. ಕೆ. ಸಾಮಿ ಅಂಡ್ ಕೋ,
೧೭ ಈವ್ನಿಂಗ್ ಬಜಾರ್ ಪೇಟೆ, ಮದ್ರಾಸು.

ಕಲ್ಕತ್ತೆಯಲ್ಲಿ ಹೊಸದಾಗಿ ನಿರ್ಮಾಣವಾದ ಕಾನೂನು ಮೇರೆ ತಪ್ಪಿತಸ್ಥರ ವಿಚಾರಣೆ ನಡೆಯುವದಂತೆ.

ಅಸ್ಸಾಂ ಭಾಷೆಯಲ್ಲಿ ಇವಾಂಮಲಿನಿ ಎಂಬ ಎಂ.ಎ. ತರಗತಿಯ ಪಠನೀಯ ಪುಸ್ತಕವನ್ನು ಬರೆದುದಕ್ಕಾಗಿ ಮೌಲ್ವಿ ಮಫೀ ಬುಡಿನ್ ಅಹಮದ್ ಹಜಾರಿ ಎಂಬುವರಿಗೆ ಸರ್ಕಾರದವರು ೨೫ ರೂಪಾಯಿ ಪೆನ್ಶನ್ ಗೊತ್ತುಮಾಡಿದಾರೆ.

ಯೂರೋಪಿನಲ್ಲಿ ಸಂಘಟನೆಯಾಗುತ್ತಿರುವ ಬದಲಾವಣೆಗಳಲ್ಲಿ ಪೋರ್ಚುಗಲ್ಲಿನ ವಿಪ್ಲವವು ನೂತನವಾದದ್ದು. ಸೈನಿಕರಲ್ಲಿ ಉಂಟಾದ ಗಲಭೆಗೆ ಪೋರ್ಚುಗೀಸ್ ಪ್ರಭುತ್ವವೇ ರಾಜೀನಾಮೆಯನ್ನು ಕೊಡಬೇಕಾಗಿಬಂತು.

ಸಾವಿರಾರು ವರ್ಷಗಳ ಹಿಂದೆ ಉತ್ತರ ಧೃವವು ಮನುಷ್ಯ ನಿವಾಸಭೂಮಿಯಾಗಿತ್ತು. ಈಗಿನಂತೆ ಹಿಮ ಬಾಧೆಯು ಆ ಪ್ರದೇಶದಲ್ಲಿರಲಿಲ್ಲ ವೆಂದು ಋಗ್ವೇದ ವಾಕ್ಯದಿಂದ ಗೊತ್ತಾಗುತ್ತಲಿದೆ. ಆಕಾಲದಲ್ಲಿ ಅಲ್ಲಿ ೬ ತಿಂಗಳು ರಾತ್ರಿ ೬ ತಿಂಗಳು ಹಗಲು ಆಗಿತ್ತಂತೆ. ಋಗ್ವೇದದಿಂದ ಆರ್ಯರು ದಸ್ಯುಗಳು ಎಂಬ ಎರಡುಬಗೆ ಜನರೇ ಇದ್ದಂತೆ ಗೊತ್ತಾಗುತ್ತದೆ. ಆರ್ ಎಂಬ ಧಾತುವು ಉಳಿವುದು ಎಂಬ ಅರ್ಥವನ್ನು ಬೋಧಿಸತಕ್ಕದ್ದಾಗಿದೆ. ಅಲ್ಲಲ್ಲಿ ಅಲೆದು ಜೀವನ ಮಾಡುವರಿಗಿಂತಲೂ ವ್ಯವಸಾಯದಿಂದ ಜೀವನಮಾಡುವವರೇ ನಾಗರೀಕರೆಂದು ಪರಿಗಣಿತವಾಗಿದ್ದಂತೆಯೂ ಆಕಾಲದಲ್ಲಿ ಒಂದೇ ಭಾಷೆಯಿದ್ದತೆಯೂ ಗೊತ್ತಾಗುತ್ತಲಿದೆ. ಪ್ರಜಾ ಸಂಖ್ಯೆ ಹೆಚ್ಚಿದ ಹಾಗೆಲ್ಲಾ ಸ್ಥಳಸಂಕೋಚ ವಶಾತ್ ಉತ್ತರ ಧೃವವನ್ನು ಬಿಟ್ಟು ಇತರ ಕಡೆಗಳನ್ನು ಸೇರಬೇಕಾಯಿತು.

ಬಿಳೀ ಬಟ್ಟೆಗಳನ್ನು ಒಗೆಯುವಾಗ ೪ ಸೇರೆಯಷ್ಟು ಬಿಸಿನೀರಿಗೆ ೧ ಚಮಚದಷ್ಟು 'ಟರ್ಪೆಂಟೈನ್' ಎಣ್ಣೆಯನ್ನು ಹಾಕಿ ಆ ನೀರಿನಲ್ಲಿ ಬಟ್ಟೆ ನೆನೆಸಿ ಒಗೆದರೆ ಬಟ್ಟೆಗಳು ಬಹಳ ಶುಭ್ರವಾಗುತ್ತವೆ

ವಿಶೇಷವಾದ ಮಾರಾಟ.

ಉಚಿತ. —— ಉಚಿತ.

18 ಕ್ಯಾರೆಟ್ ರೋಲ್ಡ್ ಗೋಲ್ಡ್ ಪ್ಲೇಟ್ ಚಿನ್ನದ ಮುಖ ಬಿಲ್ಲೆಯಿರುವ ಮುಂಗೈ ಗಡಿಯಾರ ನಂ. 100.
ಇದು ಅತ್ಯಂತ ಹೊಸ ಮಾದರಿದು. ಸುಂದರವಾದ ಆಕಾರ, ಸೊಗಸಾದ ಕೆಲಸ, ಸ್ವಿಸ್ ಮೇಡ್, ಮುಖ ಬಿಲ್ಲೆಯು ಥಳಥಳ ಹೊಳೆಯುತ್ತಾ ಆಕರ್ಷಿಸುತ್ತದೆ. 100 ರೂಪಾಯಿ ಮತ್ತು ಹೆಚ್ಚಿಗೆ ಬೆಲೆಯಿರುವ ಉತ್ಕೃಷ್ಟ ವಾಚಿನಂತೆ ಕಾಣುತ್ತದೆ. ಸುಂದರವಾಗಿಯೂ, ಚಿಕ್ಕದಾಗಿಯೂ ಇದೆ. ಗಂಡಸರಿಗೂ ಹೆಂಗಸರಿಗೂ ಉಪಯೋಗಿಸಲು ಅನುಕೂಲವಿರುವ ಅತ್ಯುತ್ತಮ ವಾಚ್. ಯಾವ ಹದದಲ್ಲಾದರೂ ಸರಿಯಾದ ಟೈಮು ಕೊಡುವ ವಾಚ್. ಮೂರು ವರ್ಷಗಳ ಗ್ಯಾರೆಂಟ್ ಕೊಡಲಾಗುದ್ದೆ. ಈ ವಾಚನ್ನು ಒಂದು ತಿಂಗಳೊಳಗಾಗಿ ಕೊಂಡುಕೊಳ್ಳುವವರಿಗೆ ನಿಕಲ್ ಟೇಬಲ್ ಟೈಮ್ ಪೀಸ್ ಒಂದು ಉಚಿತವಾಗಿ ಕೊಡಲಾಗುತ್ತದೆ ಕ್ರಯ 7 ರೂ.





ದಿ ವಿನ್ಸರ್ ವಾಚ್ ಮತ್ತು ಕಂಪೆನಿ,
ಪೋಸ್ಟಾಫೀಸ್ ಬಾಕ್ಸ್ ನಂ. 371,
ಮೌಂಟ್ ರೋಡ್, ಮದರಾಸ್.

ಹಾಲನ್ನು ಚೆನ್ನಾಗಿ ಕಾಸಿ ಸೀಸೆಯಲ್ಲಿ ಹಾಕಿ ಭದ್ರವಾಗಿ ಮುಚ್ಚಿಡುವದರಿಂದ ಕೆಲವು ದಿನಗಳ ವರಿವಿಗೆ ಅದು ಕೆಡದಂತೆ ಇರುವುದು.

ಮಾವಿನಹಣ್ಣು ಮೊದಲಾದ ಹಣ್ಣುಗಳನ್ನು ಚೆನ್ನಾಗಿ ತೊಳೆದು ವರಿಸಿ ಒಂದು ದೊಡ್ಡ ಸೀಸೆಯಲ್ಲಿ ಹಾಕಿ ಅದರ ತುಂಬ ಸಣ್ಣ ಜೇನುತುಪ್ಪವನ್ನು ಹಾಕಿ, ಗಾಳಿ ಪ್ರವೇಶಿಸದಂತೆ ಮುಚ್ಚಿಟ್ಟರೆ ಎಷ್ಟು ದಿವಸಗಳಾದರೂ ಹಣ್ಣಿನ ರುಚಿಯು ಕೆಡದಂತೆ ಇರುವದು.

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ೧೪ ವರ್ಷಗಳಿಂದ ಪ್ರಫೆಸರಾಗಿದ್ದ ಡಾ|| ಅಷರ್ವರಿಗೆ ಲೀಡ್ಸಿನ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕ ಕೆಲಸವು ದೊರೆತಿದೆ. ಅದಕ್ಕಾಗಿ ಇವರಿಗೆ ಕಾಲೇಜಿನ ವಿದ್ಯಾರ್ಥಿಗಳು ಕಳೆದ ತಿಂಗಳು ೨೮ ರಲ್ಲಿ ಸನ್ಮಾನಪತ್ರವನ್ನು ಕೊಟ್ಟರು.

ಚೆಂಗಲ್ಪಟ್ಟಿನಲ್ಲಿ ಜರಗಿದ ಆದಿದ್ರಾವಿಡರ ಪರಿಷತ್ತಿನಲ್ಲಿ ಮದ್ಯದ ಅಂಗಡಿಗಳನ್ನು ಪಂಚಮರ ನಿವಾಸಸ್ಥಳದಿಂದ ಕನಿಷ್ಠಪಕ್ಷ ೨ ಮೈಲು ವಿಸ್ತೀರ್ಣದೊಳಗಾದರೂ ಇರಗೊಡಿಸಬಾರದೆಂದು ಸರಕಾರದವರೊಡನೆ ಕೇಳಿಕೊಳ್ಳಬೇಕೆಂದು ನಿರ್ಣಯವಾಗಿರುವುದು.

ಹಾಲಿಗೆ ನೀರು ಬೆರಸಿ ಮಾರಾಟ ಮಾಡುವವರಿಗೆ ೧೦೦ ರೂಪಾಯಿಗಳಿಂದ ೫೦೦ ರೂಪಾಯಿಗಳವರೆಗೆ ಅರ್ಥದಂಡ ವಿಧಿಲಾಗುವುದೆಂದು ಮದ್ರಾಸು ಸರಕಾರದ ತೀರ್ಮಾನವೆಂದು ತಿಳಿದುಬರುತ್ತದೆ.

ಶ್ರೀ ರಾಮೇಶ್ವರೀ ದಾಸಬಿರ್ಲಾರವರು ಮಹಾತ್ಮರ ಅನುಜ್ಞೆಯಂತೆ ಅಸ್ಪೃಶ್ಯರಿಗಾಗಿ ಅಮರೇಳಿನಲ್ಲಿ ಒಂದು ದೇವಾಲಯ ಕಟ್ಟಲು ೨೫೦೦೦ ರೂಪಾಯಿಗಳನ್ನು ಅರ್ಪಿಸಿರುವರು

ಮದರಾಸಿನ ಟ್ಯುಟಿಕೋರಿನ್ ತಾಲೂಕಿನ ಲೋಕಲ್ ಬೋರ್ಡಿನವರು ಹುಡುಗಿಯರ ಶಾಲೆಯಲ್ಲಿ ನೂಲುವುದನ್ನು ಕಲಿಸಬೇಕೆಂದು ನಿರ್ಣಯಿಸಿದ್ದರು. ಆದರೆ ಇನ್ಸ್ಪೆಕ್ಟರವರು ಇದಕ್ಕೊಪ್ಪಲಿಲ್ಲವಂತೆ.

ರೂ. ೨೫ ಕ್ರಯ ಬಾಳುವ ೧೦೦ ಅತ್ಯುಪಯುಕ್ತ ವಸ್ತುಗಳಿರುವ
ಜರ್ಮನ್ ಕೋಂಬಿನೇಶನ್ ಪೆಟ್ಟಿಗೆ

——

ಈ ಪೆಟ್ಟಿಗೆಯಲ್ಲಿರುವ ವಸ್ತುಗಳು.



ದಿ ಸಿಲ್ಕ ರೈಟ್ ಫೌಂಟೆನ್ ಪೇನು 1, 22 ಕ್ಯರೆಟ್ ಗೋಲ್ಡ್ ಫೈಲ್ಡ್ ಇಮಿಟೇಶನ್ ವಜ್ರದ ಉಂಗುರ 2, 22 ಕ್ಯರೆಟ್ ಗೋಲ್ಡ್ ಫೈಲ್ಡ್ ಲಿಂಕ್ಸ್ ಮತ್ತು ಸ್ಟಡ್ಸ್‌ಗಳು 12, ಭಂಗಾರದ ಕೆತ್ತನೆಯ ಸೇಫ್ಟಿ ಪಿನ್ನು 1, ಬಿ ಸ್ಟೀಲು ನಿಬ್ಬುಗಳು 12, ಶಾಯಿ ಪೌಟ್ಲೆಗಳು 12, ಅತ್ಯುತ್ತಮ ಪೆನ್‌ನೈಫ್ 1, ಅತ್ಯುತ್ತಮ ಕತ್ತರಿ 1, ನಿಕ್ಕಲ್ ಟೋಪಿರುವ ಚೈನಾಕಪ್ಪು 1, ಬೇರೆ ಬೇರೆ ಫ್ಯಾನ್ಸಿ ಸೇಫ್ಟಿ ಪಿನ್ನುಗಳು 25, ಉತ್ತಮ ಪೆನ್ಸಿಲುಗಳು 12, ತರತರದ ಫ್ಯಾನ್ಸಿ ಶಾಯಿದಪ್ಪಿಗಳು 6, ಸೆಂಟ್ ಬಾಟಲು 1, ಉದ್ದ ಬಾಚಣಿಗೆ 1, ನ್ಯಾಷನಲ ಟ್ರೆನ್ಸ್‌ಫರ್ ಚಿತ್ರಗಳು 12.

ಹೀಗೆ ಒಟ್ಟು 100 ಅತ್ಯುಪಯುಕ್ತ ವಸ್ತುಗಳ ಬೆಲೆ ರೂ. 3—8—0. ಬೇಕಾದವರು ಬೇಗನೆ ಈ ವಿಳಾಸಕ್ಕೆ ಬರೆದುಕೊಳ್ಳಿರಿ.

ಸಿಂಪ್ಲೆಕ್ಸ್ ನೊವಲ್ಟಿ ಹೌಸ್,
ಪೋಸ್ಟು ಬಾಕ್ಸು ನಂ. 142,
ಮದ್ರಾಸ್.

ಭದ್ರಾವತಿ.

ಮಾದರಿ ಸಂಸ್ಥಾನವೆಂದೆಣಿಸಿಕೊಂಡಿರುವ ನಮ್ಮ ಮೈಸೂರು ದೇಶದಲ್ಲಿ ವಿದ್ಯಾವಂತರ ಸಂಖ್ಯೆಯೇ ಕಡಿಮೆ. ಅದರಲ್ಲೂ ವಿದ್ಯಾವಂತರಾಗಿ ದೇಶಸಂಚಾರವಮಾಡತಕ್ಕವರ ಸಂಖ್ಯೆಯು ಇನ್ನೂ ಕಡಿಮೆ. ಮುಕ್ಕಾಲುಮೂರುವೀಸಪಾಲು ಜನರೆಲ್ಲರೂ ಬೋರೇಗೌಡನು ಮೈಮುರಿದು ಕೆಲಸಮಾಡಿ ಬೆಳದ ಫಸಲನ್ನು ತಿಂದು ತೇಗತಕ್ಕವರೇ ಆಗಿರುವರು. ಬೋರೇಗೌಡನ ದುಡ್ಡನ್ನು ನಾನಾ ವಿಧವಾಗಿ ಸ್ವೀಕರಿಸಿ ದೊಡ್ಡೊಕ್ಕಲಾದವರನೇಕರುಂಟು. ನಿಜವಾಗಿಯೂ ದೊಡ್ಡೊಕ್ಕಲಾಗಿರತಕ್ಕವರಾಗಿ ಕೋಟ್ಯಾಂತರ ರೂಪಾಯಿಗಳನ್ನು ಬ್ಯಾಂಕಿನಲ್ಲುಳ್ಳ ಜನಗಳಿಲ್ಲದಿದ್ದರೂ ಲಕ್ಷಾಂತರ ರೂಪಾಯಿಗಳನ್ನಾದರೂ ಹೊಂದಿರತಕ್ಕವರುಂಟು. ಈ ಲಕ್ಷಾಂತರ ರೂಪಾಯಿಗಳು ಕೊಳೆಯುತ್ತ ಬಿದ್ದಿದ್ದರೂ ಫಲವಾಗಿಲ್ಲ. ಈ ಹಣವನ್ನೊದಗಿಸಿದ ಬೋರೇಗೌಡನಿಗೆ ಪ್ರತಿಫಲವಾಗಿ ಯಾವುದಾದರೊಂದು ಉಪಕಾರವನ್ನು ಮಾಡುವುದಕ್ಕೆ ಮಾತ್ರ ಮನಸ್ಸಿಲ್ಲ.

ಹೀಗೆ ಒದಗಿರುವ ಮೊಬಲಗನ್ನು ಉಪಯೋಗಿಸಿ, ದೀಪದಕಡ್ಡಿ ಕಾರ್ಖಾನೆ ಬಟ್ಟೆಗಳ ಕಾರ್ಖಾನೆ, ಸೀಸದಕಡ್ಡಿ ಕಾರ್ಖಾನೆ ಮೊದಲಾದ ಅನೇಕಾನೇಕ ಕಸಬುಗಳನ್ನೇರ್ಪಡಿಸಿ ಈ ಮೂಲಕ ತಮ್ಮ ಬಂಡವಾಳವೂ ವೃದ್ಧಿಯಾಗಿ, ತಮ್ಮ ಸ್ವದೇಶೀಯರಿಗೆ ಪದಾರ್ಥವು ಸುಲಭಕ್ರಯಕ್ಕೂ ಸಿಕ್ಕುವಂತಾಗಿ, ತನ್ಮೂಲಕ ಅನೇಕರ ಜೀವನವು ನಡೆಯುವುದಕ್ಕೂ, ದೇಶವು ವೃದ್ಧಿಯಾಗುವುದಕ್ಕೂ ಅವಕಾಶವನ್ನು ಕಲ್ಪಿಸತಕ್ಕ ಮಹನೀಯರೆಷ್ಟುಮಂದಿ ಎಂದು ಲೆಕ್ಕಮಾಡುವುದಕ್ಕೆ ನಾಚಿಕೆಯಾಗುವುದಲ್ಲವೆ? ಕೈಲಿರುವ ದುಡ್ಡನ್ನು ಚೆಲ್ಲಿಬಿಟ್ಟರೆ ಪುನಃ ಎಲ್ಲಿ ಸಿಕ್ಕುವುದಿಲ್ಲವೋ ಎಂಬ ಭ್ರಾಂತಿಯಿಂದಲೇ ಅನೇಕರು ಸುಮ್ಮನಿರಬಹುದು.

ಕೈಗಾರಿಕೆಯು ಬಹಳ ಮುಂದುವರಿದಿರುವ ರಾಜ್ಯಗಳಲ್ಲಿ ಸಂಚಾರ ಮಾಡಿ ಅನುಭವವನ್ನು ಪಡೆಯುವುದರಿಂದ ಮೇಲ್ಕಂಡ ಭ್ರಾಂತಿಯು ಪಾರಾಗುವುದು ನಮ್ಮ ಹಿಂದಿನ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ದೇಶವಿದೇಶಗಳ ಸ್ಥಿತಿಗಳನ್ನೆಲ್ಲಾ ಸಂಪೂರ್ಣವಾಗಿ ತಿಳಿದು ತಮ್ಮ ಅಸಾಧಾರಣ ಮೇಧಾಶಕ್ತಿಯನ್ನು ಪ್ರಪಂಚಕ್ಕೇ ತೋರಿಸಿಕೊಟ್ಟು ಯಶಸ್ವಿಗಳಾಗಿರತಕ್ಕವರು. ಇಂತಹ ಅದ್ವಿತೀಯ ಪಂಡಿತೋತ್ತಮರು ನಮ್ಮ ದೇಶಕ್ಕೆ ಮಾಡಿರುವ ಎರಡು ಮುಖ್ಯ ಸಹಾಯಗಳು ಅವರ ಹೆಸರನ್ನು ಆಚಂದ್ರಾರ್ಕವಾಗಿ ಸ್ಥಿರವಾಗುವಂತೆ ಮಾಡತಕ್ಕವುಗಳಾಗಿವೆ ಇವುಗಳಾವುವೆಂದರೆ—

1. ಕನ್ನಂಬಾಡಿಕಟ್ಟೆ 2 ಭದ್ರಾವತಿ ಕಬ್ಬಿಣಕಾರ್ಖಾನೆ.

ವಿಶೇಷಜ್ಞರಲ್ಲದ ಮತ್ತು ಸರ್. ಎಂ ವಿಶ್ವೇಶ್ವರಯ್ಯನವರನ್ನು ಅಂತರ್ಯದಲ್ಲಿ ದ್ವೇಷಿಸುವರನೇಕರು ಈ ಭದ್ರಾವತಿ ಕಾರ್ಖಾನೆಯಿಂದ ದೇಶವು ಹಾಳಾಗುವುದೆಂದು ಹೇಳುತ್ತಾ ನಾನಾ ಬಗೆಯ ತಪ್ಪು ತಿಳುವಳಿಕೆಯನ್ನು ಜನಗಳಲ್ಲುಂಟುಮಾಡಿ ಅಸೆಂಬ್ಲಿಗಳಲ್ಲಿ ಗಲಭೆಯನ್ನೆಬ್ಬಿಸಿರುವರು. ಅಸೆಂಬ್ಲಿಗಳ ಕೂಗಿನಿಂದ ಸರ್ಕಾರದವರೂ ಕೂಡ ಕೆಲವುವೇಳೆ ಭ್ರಾಂತರಾಗುವಂತೆ ಆಗಿರುವದು. ಸರ್ಕಾರದವರು ಈಗ ನಷ್ಟವಾಗಿರುವ ಸುಮಾರು ಮೂರು ಕೋಟಿ ರೂಪಾಯಿ ಜೊತೆಗೆ ಇನ್ನೂ ಮೂರುಕೋಟಿ ನಷ್ಟವಾದರೂ ಹಿಂತೆಗೆಯದೆ ಬಡವರನ್ನುದ್ಧರಿಸುವ ಈ ಕಾರ್ಖಾನೆಯನ್ನು ವೃದ್ಧಿಗೆ ಬರುವಂತೆ ಮಾಡಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಎಸ್ ಕೆ. ಶರ್ಮ

ಒಂದು ನವೀನ ನಾಟಕ.

(ಬರೆದು ಬಂದುದು)

ದೇಶಬಾಂಧವರು ಧೀನಾಟಕವೆಂಬುದಾಗಿ ಒಂದು ನಾಟಕವಂ ರಚಿಸಿದ್ದಾರೆ. ಅದು ಐದು ಅಂಕವಿದೆ. ಅದರ ಪ್ರಾರಂಭದಲ್ಲಿ ಈರೀತಿಯಾಗಿ ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ ೪ ಶ್ಲೋಕವಂ ಮಾಡಿದ್ದಾರೆ.

ದೈವಂಲೋಕಕೆ ಆವನೋತಿಳಿಯದೈ ಅಜ್ಞಾನದಿಂ ಕೂಡಿಯೇ | ಆವಂ ವಿಷ್ಣುಶಿವಾದಿ ಇಂದ್ರರುಗಳಂ ಧಿಕ್ಕಾರದಿಂ ಕಾಣ್ವನೋ || ದೇವಂಥರ್ ಎನುವಂ ಸದಾ ಜನದನುಡಿ | ಇಷ್ಟಾರ್ಥದಿಂ ರಕ್ಷಿಪಂ | ಈಷಂಕೇಳಿದುದೆಲ್ಲ ತತ್ಕ್ಷಣದೊಳೇ ಆ ದೇವನಂ ವಂದಿಪೇಂ ||

ದುಂಡಾಗಿರ್ಪನವಂ ಮನೋಹರನೆಲಾ ತಾ ಬೆಳ್ಳಗಿರ್ಪಂಸದಾ | ಕಾಂಚಂಮಂಡಲವಂ ಹನಾಹನಿಯೊಳೇ ಗುದ್ದಾಡಿಪಂಲೋಕಮಂ || ಸದ್ದೇಮಾಡನವಂ ವಿರೋಧಿಗಳನುಂ ಓಡಾಡುವಂ ಜೇಬಿನೋಳ್ | ಮಾಡುತ್ತಂ ಉಪಕಾರಮಂ ಜನರಿಗೆ ನಾಬೇಡ್ವೆನಾದೈವಮಂ ||

ದೈವಂ ಲೋಕಕೆ ನಾಣ್ಯಮೇ ಹಣವದೇ ಸೌಖಕ್ಕೆ ಸತ್ಸಾಧನಂ | ನೋವಂನೀಯದೆ ಸಾಕುವಂ ಜನರನುಂ ಓಡಾಡುತಂ ಜೇಬಿನೋಳ್ || ಸವಂ ಭೋಗವನುಂ ವಿಹಾರದಿ ಸದಾ ದುಡ್ಡೆಂಬುದೇದೈವವೊ | ದೇವೀ ಕಾಮಿನಿಯೋರ್ವಳೇ ಧನಮಿದೇ ತಾ ನೀವಳೈ ಸೌಖ್ಯಮಂ ||

ಜಾತಿ ಎಂಬುದು ಲೋಕದೊಳ್ಗೆರಡೆಲಾ ಹೆಣ್ಣೊಂದು ಗಂಡೊಂದು ಕೇಳ್ | ಜೋತೆಯುಂತಿಹುದೊ ಸದಾ ವಿಹರಿಸೇ ಪ್ರಾಯಂಗಳೊಳ್ಪೇಳಿದಂ || ಜಾತೀವಿಬರು ನೀತಿಯುಂ ತಿಳಿಯದೇ ಮುಚ್ಪದ ಮೇಲ್ಪೂರ್ವನು | ಜಾತಿಯುಂವದು ಬೇರೆಯೊಂದು ಇಹುದೋ ನಾಕಾಣೆ ನಾರಾಯಣಾ || .

ನಟೀ ಹೇಳುತ್ತಾಳೆ.

ಪ್ರಜೆಗೇಹಿಂದಧಿಕಾರಿ |
ಗಳ್ಗೇವಿಪರೀತಿಯು ತೋರ್ಪ್ದಧೀನಾಟಕನ್ಯೆ ||
ರಾಜನು ತಿಳಿವಂಅದರಿಂ |
ಪ್ರಜೆಗಳ ಗೋಳನು ಮಾಡಲು ಕ್ಷೇಮವಧೀರಂ ||

ಮತ್ತೊಂದುಕಡೆ ಈರೀತಿ ಇದೆ.

ರಾಜನು ಲೋಕಕೆ ಹಿತನೈ !
ಪೂಜ್ಯನು ಆಲಿಸಿ ಪಾಲಿಸೆ ಪ್ರಜೆಗಳ ನಿತ್ಯಂ ||
ರಾಜನೆ ವೈರಿಯು ಲೋಕಕೆ |
ಪ್ರಜಗಳ ಶತ್ರುಹಿಂಸಿಸೆ ಧನಕೋಸುಗವೇ ||

ತಾಮತಿ ಇಟ್ಟವರಂ ಪಾಲ |
ನೆ ಮಾಡದಿತ್ತಾಧಿಕಾರಿಗಳ ವಶಕೆ ||
ನೇಮವ ನೀತಿಯು ನೋಡದೆ |
ಅಮಿತ ಕಾಠಿಣ್ಯದಿ ಕೊಲ್ವರೊ ಪ್ರಜಗಳನುಂ ಕೇಳ್ ||

ಅಧಿಕಾರದ ಕೊಬ್ಬಿನಲಿ |
ಮದಿಸಿ ಪ್ರಜಗಳ ಹೇಳಿಕೆಯು ಆಲಿಸರೈ ||
ಗದರಿಶಿಕೊಳದುಳಣಾ |
ಆದರಸರು ಹೇಳಿಕೆಯ ನೀಡರು ನ್ಯಾಯಂ ||

ಕೊಲ್ವರ್ ಭ್ರಷ್ಟಧಿಕಾರಿಗಳ್ |
ಬಿಲ್ಲಿನಂತಿಹ ಪೇನವ ಪಿಡಿದೇ ಕೊಲ್ವರೆಲಾ ||
ಕೊಲ್ವರ್ನೆತ್ತರು ಕಾಣದೆಲೆ |
ಬಲಹೀನರನುಂ ಧನದಾಸೆಯಲಿ ಪ್ರಭುವೆ ||

ಮಂತ್ರಿಯು ತಾನುತ್ತಮನೆನಿ |
ಸಿ ತಂತ್ರದಿ ರಾಜ್ಯರಿನಾಳಿದರಲ್ಲವೆ ಲೇಸು ||
ಮಂತ್ರಿಯೆ ಬಾಯನು ಬಡಿಯೆ |
ನಾ ಕೋರುವದೇನು ರಾಜ್ಯದೋನ್ಯಾಯವನುಂ ||

ಮನೆಗೆ ಬಾಗಿಲ ಬಿಗಿಯಂ |
ತೆ ನೀತಿಯು ಮಂತ್ರಿಯೆ ರಾಜ್ಯಕೆ ಕ್ಷೇಮದೆ ಭಿಗ ||
ನೀ ನೀತಿಯು ಬಿಟ್ಟರೆ ದೇವ |
ನಾನೀಸಮಯದಿ ವೈಮನರೆಯನು ಕೇಳ್ಮಂತ್ರೀಶ ||

ತೆರುವರ್ಪ್ರಜೆಗಳ್ಧನವಂ |
ಮೀರಿದ ಕಂದಾಯದ ಹೊರೆಯುಂ ಹೊತ್ತವರಾಗಿ ||
ಶೇರದೆ ರಾಜನ ಕೋಶವ |
ಕರಗಿಸುವರೀ ಅಧಿಕಾರಿಗಳ್ದುಂದಿನಲೀ ||

ಟೀಪ ಎಂಬರೆಲಾ ಇಮಗೆ |
ಅಯ್ಯೋ ಸುಬಳಕೆ ದಗುಣೀ ಹೊಡೆವರೀನವದೋಳ್ ||
ಕೊಯ್ಯುತ ಕಂದಳಂ ನೀಡದೆ |
ನ್ಯಾಯವ ಕೊಟ್ಟರ್ಜಯು ಗೊಟ್ಟದೊಳಿಡುವರೆಲಾ ||

ಮಂತ್ರಿಯು ಕಾಣಲು ಪೋದರ |
ದೂತರು ಬಿಡರು ಬಾಗಿಲಕಾಯುವರು ಬಿಗಿಯಿಂ ||
ಕೂತು ದ್ವಾರಿಯು ಕಾದರುನಾಪ್ |
ಸತ್ತದುಸಂಜಯು ಬಾರನು ಮಂತ್ರಿಯು ಹೊರಗೆ ||

ರಾಜ್ಯದಿ ಕೋಶವು ಬರಿದೈ |
ಪ್ರಜಗಳ ಗೋಳನು ಕೇಳ್ವಧಿಕಾರಿಯ ಕಾಣೆ ||
ರಾಜನು ಮನ್ನಿಸಿ ಲಾಲಿಸಿ |
ಪ್ರಜಗಳ ಗೋಳನು ಕೇಳದೊಡೆನ್ನುವರ್ ಪ್ರಭುವೇ ||

ಈರೀತಿ ಪದ್ಯಗಳು ಮೊದಲನೇ ಅಂಕದಲ್ಲಿವೆ. ಎರಡನೇ ಅಂಕದಲ್ಲಿ ಇನ್ನೂ ಸ್ವಾರಸ್ಯ, ಮೂರನೇ ಅಂಕದಲ್ಲಿಯೂ ಸ್ವಾರಸ್ಯದ ಪದ್ಯಗಳೇ ಇರುವವು

– ಈ ನಾಟಕಕ್ಕೆ ಧೀನಾಟಕವೆಂದು ಹೆಸರು ಇಟ್ಟಿರುವುದು ಸಾರ್ಥಕವೆಂದೇ ಹೇಳಬಹುದಾಗಿದೆ. ಇದನ್ನು ಆಮೂಲಾಗ್ರವಾಗಿ ಮುದ್ರಿಸಲು ನಿಮ್ಮ ಪತ್ರಿಕೆಯಲ್ಲಿ ಸ್ಥಳವು ಸಾಲದು, ಇದು ಒಂದು ದೇಶದ ಸ್ಥಿತಿಯಂ ವರ್ಣಿಸಿ ಅದು ಮುಂದೆ ಅಭಿವೃದ್ಧಿಯ ದಾರಿಯಂ ತೋರ್ಪಡಿಸುವದರಲ್ಲಿ ಮುಖ್ಯವಾಗಿದೆ ಈ ಕವಿಯು ದೇಶಾಭ್ಯುದಯಕ್ಕೆ ಅಭಿಮಾನಿಗಳೋ ಅನ್ನುವಹಾಗಿದೆ.

ಶ್ರೈವೃಭಾಷಾಕವಿ.

—ಮೊನ್ನೆ ಬಳ್ಳಾರಿಯಲ್ಲಿ ನಡೆದ ಕರ್ಣಾಟಕ ಕೀರ್ತನಕಾರರ ಪರಿಷತ್ತಿಗೆ ನಮ್ಮ ಸಂಸ್ಥಾನದಿಂದ ಅನೇಕಮಂದಿ ಕೀರ್ತನಕಾರರು ಹೋಗಿದ್ದರು ಶ್ರೀಮಾನ್ ಬೇಲೂರು ಕೇಶವದಾಸರಿಗೆ 'ಕೀರ್ತನಾಲಂಕಾರ' ಎಂಬ ಬಿರುದನ್ನೂ ಸೋಸಲೆ ರಾಮದಾಸರಿಗೆ 'ಕೀರ್ತನಧುರೀಣ' ಎಂಬುದೂ ಮುಳಗುಂದ ರಾಮಾಶಾಸ್ತ್ರಿಗಳಿಗೆ 'ಕೀರ್ತನಶಿರೋಮಣಿ' ಎಂದೂ ಮತ್ತು ಚಿತ್ರದುರ್ಗದ ಭೀಮರಾಜುರವರಿಗೆ 'ಹರಿಕಥಾವಿದ್ವಾನ್' ಎಂದೂ ಬಿರುದುಗಳೂ ಭಂಗಾರದ ಪದಕಗಳೂ ದೊರೆತಿರುವದಾಗಿ ತಿಳಿಯಬಂದಿದೆ. ಮುಂದಿನ ಕೀರ್ತನ ಸಮ್ಮೇಳನವು ಗುಲ್ಬರ್ಗಾದಲ್ಲಿ ನಡೆಯುವದು.

—ಶ್ರೀ ತಗಡೂರು ರಾಮಚಂದ್ರರಾಯರ ಕರ್ಣಾಟಕ ಪ್ರಾಂತಿಕ ಸಭೆಗೆ ಕಣಿಯರ ಆಹವಾಲನ್ನು ಮುಟ್ಟಿಸಲು ಬಳ್ಳಾರಿಗೆ ಹೋಗಿದ್ದರು ಪ್ರಾಂತಿಕ ಸಭೆಯ ಸದಸ್ಯರು ಸಾವಧಾನದಿಂದ ಆಲಿಸಿ, ಕಾರ್ಯಕಾರೀ ಮಂಡಲಿಯಲ್ಲಿ ಕಣಿಯರ ಚಳವಳಿ ಬಗ್ಗೆ ಸಂಪೂರ್ಣ ಸಹಾನುಭೂತಿಯ ಠರಾವನ್ನು ಮಾಡಿದರೆಂಬದಾಗಿ ತಿಳಿಯಬರುತ್ತೆ ಭರತಖಂಡದ ಹಿಂದೂಸ್ಥಾನೀ ಸೇವಾದಳದ ಸೇನಾಪತಿಯರಾದ ಡಾ | ಹರ್ಡಿಕರರವರು ತಮ್ಮ ಸ್ವಯಂಸೇವಕರೊಡನೆ ಅವಶ್ಯವಾಗಿ ಬಂದು ಯಥಾಶಕ್ತಿ ಸಹಾಯವನ್ನು ಮಾಡುವೆನೆಂದು ಶ್ರೀ ರಾಮಚಂದ್ರರಾಯರಿಗೆ ವಾಗ್ದಾನ ಮಾಡಿರುವರಂತೆ.

**Printed and published at the
Satyavadi Press, Mysore**